O.S.No.:122/12

D.W.:1

ಈ ದಿನ ದಿಃ 31-05-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಡಿ ಸಿ ವಕೀಲರಿಂದಃ

ನಾನು ಕನ್ನಡ ಭಾಷೆಯಲ್ಲಿ 10 ನೇ ತರಗತಿ ವರೆಗೆ ಓದಿರುತ್ತೇನೆ. ನನ್ನ ಪ್ರತಿವಾದ ಪತ್ರಕ್ಕೆ ಮಾಹಿತಿಯನ್ನು ನನ್ನ ವಕೀಲರಿಗೆ ನಾನೇ ಮಾಹಿತಿಯನ್ನು ಕೊಟ್ಟಿರುತೇನೆ . ನನಗೆ ಆಂಗ್ಲ ಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪತ್ರಕ್ಕೆ ನಾನೇ ಮಾಹಿತಿಯನ್ನು ಕೊಟ್ಟಿರುತ್ತೇನೆ . ನಾನು ಮೂಲತಃ ಕಾಡಾಪೂರ ಗ್ರಾಮದನು ಆಗಿರುತ್ತೇನೆ. ಬಂಡು ಕುಲಕರ್ಣಿ ನನಗೆ ಅಜ್ಜ ಆಗಬೇಕು . ಅವರಿಗೆ ಇಬ್ಬರೂ ಜನ ಮಕ್ಕಳು ಅವರ ಹೆಸರು ಮಧುಕರ ಮತ್ತು ಪ್ರಭಾಕರ. ನನ್ನ ತಂದೆ ಮಧುಕರ ಮತ್ತು ಕಾಕಾ ಪ್ರಭಾಕರ ಒಕ್ಕತಲುನ ಮಾಡುತ್ತಿದ್ದರು. ನನ್ನ ತಂದೆ ಮಧುಕರ ಮತ್ತು ಕಾಕಾ ಪ್ರಭಾಕರ ರವರು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ. ನನ್ನ ತಂದೆ ಮತ್ತು ಕಾಕಾ ಈಗ ಜೀವಂತವಾಗಿಲ್ಲ.

ನನ್ನ ತಂದೆ ಮಧಕರವರಿಗೆ ನಾವು ಇಬ್ಬರೂ ಜನ ಮಕ್ಕಳು . ನನ್ನ ತಾಯಿ ಈಗ ಜೀವಂತವಾಗಿಲ್ಲ. ನನ್ನ ಕಾಕಾ ಪ್ರಭಾಕರ ರವರ ಪತ್ನಿಯಾ ಸಹ ಈಗ ಜೀವಂತವಾಗಿಲ್ಲ ಮತ್ತು ಅವರಿಗೆ ಮಕ್ಕಳು ಸಹ ಇರಲಿಲ್ಲ. ಕೇರೂರು ಗ್ರಾಮದ ಹದ್ದಿಯಲ್ಲಿ ನಮ್ಮ ಮನೆಗೆ ಸಂಬಂಧಿಸಿದಂತೆ 9 ಎಕರೆ ಜಮೀನು ಇದೆ. ನಾವು ಮತ್ತು ನಮ್ಮ ಅಜ್ಜನವರು ಪ್ರಾರಂಭದಿಂದಲೂ ಕಾಡಾಪೂರದಲ್ಲಿ ವಾಸಿಸುತ್ತಿದ್ದೇವು . ಆದರೆ ಕಾಡಾಪೂರದಲ್ಲಿ ನಮ್ಮ ಕುಟುಂಬಕ್ಕೆ ಸಂಬಂಧಿಸಿದಂತೆ ಯಾವುದೇ ಜಮೀನು ಇರುವುದಿಲ್ಲ . ನನ್ನ ತಮ್ಮನ ಹೆಸರು ದಿನಕರ . ನಮ್ಮ ಕುಟುಂಬದ ಆದಾಯ ಒಕ್ಕತಲುನತದಿಂದ ಬರುತ್ತದೆ.

ದಾವಾ ಆಸ್ತಿ ಕುಲಕರ್ಣಿ ಇನಾಮ ಜಮೀನು ಆಗಿದೆ. ಸದರಿ ದಾವಾ ಆಸ್ತಿ ನಮ್ಮ ಅಜ್ಜನ ಹೆಸರಿನಲ್ಲಿ 1964 ರಲ್ಲಿ ರೀ ಗ್ರ್ಯಾಂಟ್ ಆಗಿದೆ. ಆ ಬಗ್ಗೆ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ರೀ ಗ್ರ್ಯಾಂಟ್ ದಾಖಲಾತಿ ನನ್ನ ಬಳಿ ಇರುತ್ತದೆ. 2012 ರಲ್ಲಿ ದಾವಾ ಜಮೀನು ರೈತಾವಾ ಆಗಿರುತ್ತದೆ. ರೈತಾವಾ ಮಾಡಲು ನಾನು ಅರ್ಜಿ ಕೊಟ್ಟಿರುತ್ತೇನೆ. ಗ್ರ್ಯಾಂಟ್ ಭೂಮಿ ರೈತಾವ ಆಗುವವರೆಗೆ ವೈಹಿವಾಟ ಆಗುವುದಿಲ್ಲ ಎಂದರೆ ಸರಿ.

ಸರ್ವೇ ನಂ. 784 ರಲ್ಲಿ 30 ಗುಂಟೆ ಜಮೀನು, ಸರ್ವೇ ನಂ. 785 ರಲ್ಲಿ 3 ಎಕರೆ 10 ಗುಂಟೆ, ಸರ್ವೇ ನಂ. 682/1 ರಲ್ಲಿ 5 ಎಕರೆ 10 ಗುಂಟೆ ಜಮೀನನ್ನು ನಾವು ಹೊಂದಿರುತ್ತೇವೆ . ಈಗ ಹೇಳಿರುವ 3 ಜಮೀನುಗಳಿಗೆ ನೀರಿನ ಸೌಕರ್ಯ ಇಲ್ಲ ಎಂದರೆ ಸರ್ವೇ ನಂ. 784 ಮತ್ತು 785 ರಲ್ಲಿ ಭಾವಿ ಇರುತ್ತದೆ. ದಾವಾ ಆಸ್ತಿಯಲ್ಲಿ ಭಾವಿ ಇಲ್ಲ. ಸದರಿ ಭಾವಿಯನ್ನು 1994 ರಲ್ಲಿ ತೆಗೆದಿರುತ್ತೇವೆ. ಮೇಲೆ ಹೇಳಿರುವ 3 ಜಮೀನುಗಳು ನನ್ನ ಅಜ್ಜ ಮತ್ತು ತಂದೆ ಬೇರೆಯವರು ಮೂಾಲಕ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿ. 1 ಭಾವಿಯ ಮೇಲೆ 1 ಎಕರೆ ವರೆಗೆ ಬಾಗಾಯಿತಿ ಮಾಡಬಹುದು ಎಂದರೆ 3 ರಿಂದ 4 ಎಕರೆ ಮಾಡಬಹುದು. ಸರ್ವೇ 784 ಮತ್ತು

785 ರಲ್ಲಿ ಕಬ್ಬನ್ನು ಬೆಳೆಯುತ್ತೇವೆ. ಭಾವಿ ಮತ್ತು ಕಬ್ಬು ಬೆಳೆಯುತ್ತೇವೆ ಎಂಬ ಸಂಗತಿಯನ್ನು ತೋರಿಸಲು ನನ್ನ ಬಳಿ ದಾಖಲಾತಿ ಇಲ್ಲಾ ಎಂದರೆ ನನ್ನ ಬಳಿ ಇವೆ . ಸದರಿ ಭೂಮಿಗಳಲ್ಲಿ ಭಾವಿ ಇದೆ ಮತ್ತು ಅಲ್ಲಿ ನಾವು ಬಾಗಾಯತಿ ಮಾಡುತ್ತೇವೆ ಎಂದುಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ಕುಟುಂಬಕ್ಕೆ ಸೇರಿರುವ ಜಮೀನಿನಿಂದ ಎಷ್ಟು ಆದಾಯ ಬರುತ್ತಿತ್ತು ಎಂದು ತೋರಿಸಲು ನನ್ನ ಬಳಿ ದಾಖಲಾತಿ ಇಲ್ಲ ಎಂದರೆ ಕಬ್ಬಿನ ಬಿಲ್ಲು ಇರುತ್ತದೆ. ಒಕ್ಕತಲುನ ಖರ್ಚು ಮತ್ತು ರೈತರ ಆದಾಯ ಹೋಗಿ ನಮ್ಮ ಬಳಿ ಹೆಚ್ಚಿನ ಹಣ ಉಳಿಯುತ್ತಿರಲ್ಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಬೆಳೆಯ 25% ನ್ನು ರೈತರಿಗೆ ಕೊಡುತ್ತಿದ್ದೇವು. ವಾರ್ಷಿಕವಾಗಿ ಎಲ್ಲಾ ಖರ್ಚುಗಳನ್ನು ತೆಗೆದು 50% ಉಳಿತಾಯವಾಗುತ್ತಿತ್ತು. ಒಕ್ಕತಲುನದಿಂದ ಆದಾಯ ಅಷ್ಟಕಷ್ಟೆ ಇದ್ದರಿಂದ ನನ್ನ ತಂದೆ ಮತ್ತು ಅಜ್ಜನ ಆರ್ಥಿಕ ಸ್ಥಿತಿ ಸರಿ ಇರಲ್ಲಿಲ್ಲ ಎಂದರೆ ಸರಿಯಲ್ಲ.

ವಾದಿಗಳ ಪರಿಚಯ ನನಗೆ ಇಲ್ಲ. ವಾದಿಗಳ ಮತ್ತು ನಮ್ಮ ಮನೆತನದ ನಡುವೆ ಎಸಿ , ತಹಶೀಲ್ದಾರ ಕಚೇರಿಯಲ್ಲಿ ಸಾಕಷ್ಟು ವಿವಾಧಗಳು ಇವೆ ಎಂದರೆ ಸರಿ . ದಾವಾ ಆಸ್ತಿಯ ಕೈಬರಹ ಉತಾರವನ್ನು ನಾನು ನೋಡಿರುತ್ತೇನೆ. ದಾವಾ ಆಸ್ತಿಯ ಕೈಬರಹ ಹಳೆಯ ಉತಾರದಲ್ಲಿ ಪ್ರೋಟೆಕ್ಟಡ್ ಟೇನೆಂಟ್ ಎಂದು ವಾದಿಗಳ ಹೆಸರು ಇದೆ ಎಂದರೆ ಸರಿಯಲ್ಲ . ವಾದಿಗಳ ಹೆಸರನ್ನು ತೆಗೆಯಬೇಕೆಂದು ನಾನು ನೀಡಿರುವ ಅರ್ಜಿಯ ಮೇರೆಗೆ ತಹಶೀಲ್ದಾರ ಮತ್ತು ಎಸಿ ಕಚೇರಿಯಲ್ಲಿ ಪ್ರಕರಣ ನಡೆದಿತ್ತು ಎಂದರೆ ಸರಿಯಲ್ಲ . ವಾದಿಗಳು ದಾವಾ ಆಸ್ತಿಯ ಮೇಲೆ ಹಕ್ಕು ಕೇಳಿ ಫಾರಂ ನಂ .7 ಎ ಅರ್ಜಿಯನ್ನು ಸಹ ದಾಖಲಿಸಿದ್ದರು ಎಂದರೆ ಸರಿಯಲ್ಲ . ಲ್ಯಾಂಡ್ ಟ್ರೀಬ್ಯೂನಲ್ ನವರು ಸದರಿ ಆರ್ಜಿಗೆ ಸಂಬಂದಿಸಿದಂತೆ ಬಹಳ ವರ್ಷಗಳಿಂದ ವಾದಿಗಳು ಸದರಿ ಆಸ್ತಿಯಲ್ಲಿ ರೈತರು ಆಗಿದ್ದರು ಎಂದು ಆದೇಶ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಆದೇಶದ ಮೇಲೆ ನಾನು ಮೇಲ್ಮನವಿಯನ್ನು ಸಲ್ಲಿಸಿಲ್ಲ.

1984 ರಲ್ಲಿ ನನ್ನ ತಂದೆ ಮಧಕರ ಮತ್ತು ನನ್ನ ಕಾಕಾ ಪ್ರಭಾಕರ ರವರು ಪ್ರಾಪಂಚೀಕ ಅಡಚಣೆಗಾಗಿ ದಾವಾ ಆಸ್ತಿ ಮಾರಾಟಕ್ಕೆ ಕರೆದಿದ್ದರು ಎಂದರೆ ಸರಿಯಲ್ಲ . ವಾದಿ ನಂ.1 ಮತ್ತು 2 ರವರು ಪ್ರತಿವಾದಿಗಳಿಂದ ದಿಃ 16.07.1984 ರಂದು ಸದರಿ ಆಸ್ತಿಯನ್ನು ಖರೀದಿಸಲು ಒಪ್ಪಿ ದ್ದಕ್ಕಾಗಿ ಖರೀದಿ ಕರಾರು ಪತ್ರವನ್ನು ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ . ವಾದಿಗಳು ನನ್ನ ತಂದೆ ಮತ್ತು ಕಾಕಾನಿಗೆ ರೂ .11000/-ಗ ಳನ್ನು ಮುಂಗಡ ಹಣವಾಗಿ ನೀಡಿದ್ದು, ರೂ. 14000/- ಗಳನ್ನು ನೋಂದಣಿ ಮಾಡುವ ಸಮಯಕ್ಕೆ ಕೊಡುತ್ತೇವೆ ಎಂದು ಮಾತು ಆಗಿತ್ತು ಎಂದರೆ ಸರಿಯಲ್ಲ. ಸದರಿ ಆಸ್ತಿ ರೈತವಾ ಆದ ಮೇಲೆ 3 ವರ್ಷಗಳ ಒಳಗಡೆ ಕ್ರಯ ಪತ್ರ ಮಾಡಿಕೊಡುವ ಮಾತು ಆಗಿತ್ತು ಎಂದರೆ ಸರಿಯಲ್ಲ . ಅದೇ ರೀತಿ ಸದರಿ ಕರಾರು ಪತ್ರದಲ್ಲಿ ವಾದಿಗಳು ಅವರ ಸ್ವಾಧೀನವನ್ನು ಮುಂದುವರಿಸಬಹುದು ಎಂದು ಬರೆಯಲಾಗಿತ್ತು ಎಂದರೆ ಸರಿಯಲ್ಲ . ನನ್ನ ಕಾಕಾ ಮತ್ತು ನನ್ನ ತಂದೆ ರೂ.14000/- ರಲ್ಲಿ ರೂ. 4000/-ಗಳನ್ನು ವಾದಿಯಿಂದ ಪಡೆದುಕೊಂಡು ಅದಕ್ಕೆ ಸ್ವೀಕೃತಿಯನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ನನ್ನ ಕಾಕಾ ರೈತಾಪಿ ಆದ ನಂತರ ಕ್ರಯ ಪತ್ರ ಬರೆದುಕೊಟ್ಟಿಲ್ಲ ಆ ಕಾರಣಕ್ಕಾಗಿ 1993 ರಲ್ಲಿ ವಾದಿಗಳು ಒಂದು ದಾವೆಯನ್ನು ದಾಖಲಿಸಲಾಗಿತ್ತು ಎಂದರೆ

ಸರಿಯಲ್ಲ. ವಾದಿಗಳು ಆ ದಾವೆಯನ್ನು ರೈತಾಪಿ ಆಗಿಲ್ಲ ಎಂದು ವೀತ್ ಡ್ರಾ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಈ ಎಲ್ಲಾ ವಿಚಾರ ಗೊತ್ತಿದ್ದರು ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಗಳು ವಿರುದ್ಧ ನಾನು ದಾವೆ ಹಾಕಿ ಅವರಿಂದ ಸ್ವಾಧೀನ ಪಡೆದುಕೊಂಡಿಲ್ಲ ಎಂದರೆ ನಾವೇ ಸ್ವಾಧೀನದಲ್ಲಿ ಇರುತ್ತೇವೆ. ದಾವಾ ಆಸ್ತಿಯಲ್ಲಿ ವಾದಿಗಳೆ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ . ದಾವಾ ಆಸ್ತಿಯಲ್ಲಿ ನಾವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆ ಮತ್ತು ಕಾಕಾ ರವರು ದಾವಾ ಆಸ್ತಿಯನ್ನು ಮಾರಾಟ ಮಾಡಲು 20.01.2004 ರಲ್ಲಿ ವಾದಿಗಳಿಗೆ ಇನ್ನೊಂದು ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ . ಸದರಿ ಕರಾರದ ಅಡಿಯಲ್ಲಿ ಸಂಪೂರ್ಣ ಹಣವಾದ ರೂ.2,90,000/-ಗಳನ್ನು ಸಹ ನನ್ನ ತಂದೆ ಮತ್ತು ಕಾಕಾ ವಾದಿಗಳಿಂದ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕರಾರಿನಲ್ಲಿ ವಾದಿಗಳ ಸ್ವಾಧೀನವನ್ನು ಮುಂದುವರಿಸಲಾಗಿದೆ ಎಂದರೆ ಸರಿಯಲ್ಲ. ಸದರಿ ಕರಾರು ಪತ್ರವನ್ನು ಬರೆಯುವಾಗ ನನ್ನ ತಂದೆ ಮತ್ತು ಕಾಕಾ ಒಂದು ತಿಂಗಳಲ್ಲಿ ರೈತಾವ ಮಾಡಿ ಕ್ರಯ ಪತ್ರ ಬರೆದುಕೊಡುತ್ತೇವೆ ಎಂದು ಒಪ್ಪಿಕೊಂಡಿರುತ್ತಾರೆ ಎಂದರೆ ಸರಿಯಲ್ಲ . ಆ ಕರಾರು ಪತ್ರ ಆಗುವಾಗ ನಾನು ಮತ್ತು ನನ್ನ ಸಹೋದಾ ಹಾಜರರಿದ್ದು ಸಂಬಂಧಿಕರಾಗಿ ನಾವು ಸಹ ಆ ಕರಾರು ಪತ್ರಕ್ಕೆ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಈ ರೀತಿ ಕರಾರು ಪತ್ರ ಬರೆದುಕೊಟ್ಟು ಹಣವನ್ನು ತೆಗೆದುಕೊಂಡಿದ್ದರು ಸಹ ಆ ಜಮೀನನ್ನು ವಾದಿಗಳಿಗೆ ನಾವುಗಳು ರೈತಾವ ಮಾಡಿಕೊಡಲಿಲ್ಲ ಎಂದರೆ ಸರಿಯಲ್ಲ. ವಾದಿಗಳು ನನ್ನ ತಂದೆ, ನನ್ನ ಕಾಕಾ ಮತ್ತು ನಮ್ಮ ಬಳಿ ಬಂದು ಸಾಕಷ್ಟು ಸಲ ರೈತಾವ ಮಾಡಿ ಖರೀದಿ ಪತ್ರ ಬರೆದುಕೊಡಲು ಕೇಳಿಕೊಂಡಿದ್ದರು ಎಂದರೆ ಸರಿಯಲ್ಲ. ನಾವುಗಳು ರೈತಾವ ಮಾಡಿ ಪತ್ರ ಬರೆದುಕೊಡುತ್ತೇವೆ ಎಂದು ಹೇಳಿ ಅದನ್ನು ಮುಂದೂಡುತ್ತಾ ಬಂದಿರುತ್ತೇವೆ ಎಂದರೆ ಸರಿಯಲ್ಲ.

ಪ್ರಸ್ತುತ ದಾವೆಯನ್ನು ದಾಖಲಿಸುವ ಪೂರ್ವದಲ್ಲಿ ವಾದಿಗಳು ವಕೀಲರ ಮೂಲಕ ನಮಗೆ ನೋಟೀಸ್ ನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ . ನಾವು ಉದ್ದೇಶಪೂರ್ವಕವಾಗಿ ಸದರಿ ನೋಟೀಸವನ್ನು ಸ್ವೀಕರಿಸದ ವಾಪಸ್ಸು ಕಳುಹಿಸಿರುತ್ತೇವೆ ಎಂದರೆ ಸರಿಯಲ್ಲ . ನೋಟೀಸ ಬಂದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕಾಡಾಪೂರ ಗ್ರಾಮದಲ್ಲಿ 18000 ರವರೆಗೆ ಜನಸಂಖ್ಯೆ ಇದೆ. ಕಾಡಾಪೂರ ಗ್ರಾಮದಲ್ಲಿ ನಾನು ಪ್ರತಿವಾದಿ ನಂ.2 ರವರನ್ನು ಬಿಟ್ಟರೆ ಬೇರೆ ಯಾರು ಕುಲಕರ್ಣಿ ಇಲ್ಲ ಎಂದರೆ ಸರಿ . ಕಾಡಾಪೂರ ಸಣ್ಣ ಗ್ರಾಮವಾಗಿದ್ದರಿಂದ ಊರಲ್ಲಿ ಎಲ್ಲರಿಗೆ ನಮ್ಮ ಪರಿಚಯವಿದೆ ಎಂದರೆ ಸರಿ . 2012 ರಲ್ಲಿ ರೈತಾವ ಮಾಡಲು ಅರ್ಜಿಯನ್ನು ಲೋನ್ ತೆಗೆಯಲು ನೀಡಿರುತ್ತೇವೆ.

ನಿಪಿ1 ಕರಾರು ಪತ್ರವನ್ನು ನಾನು ನೋಡಿರುತ್ತೇನೆ . ನಿಪಿ1 ಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದರೆ ಮಾಡಿಲ್ಲ. ಅದೇ ರೀತಿ ನನ್ನ ತಂದೆ , ನನ್ನ ಕಾಕಾ ರವರು ಸಹ ನಿಪಿ 1 ಕ್ಕೆ ಸಹಿ ಮಾಡಿರುತ್ತಾರೆ ಎಂದರೆ ಅವರು ಕನ್ನಡದಲ್ಲಿ ಸಹಿ ಮಾಡುತ್ತಾರೆ ಇದು ಇಂಗ್ಲೀಷದಲ್ಲಿ ಇರುತ್ತದೆ . ಅದೇ ರೀತಿ ಪ್ರತಿವಾದಿ 2 ರವರು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಪತ್ರ ಬರಹಗಾರಾದ ಎಸ್ ಎಸ್ ಎಂಟೆತ್ತಿನ್ನವರ ರವರು ಸಹ ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಅದೇ ರೀತಿ ಲಕ್ಷ್ಮಣ ಪರಸಾ ಪವಾರ ಮತ್ತು ವಿರುಪಾಕ್ಷಿ ಭಿಮಾಪೂರ

ನಿಪಿ1 ಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ . ನಿಪಿ1 ರ ಬಗ್ಗೆ ನನಗೆ ಪ್ರಸ್ತುತ ದಾವೆಯನ್ನು ದಾಖಲಿಸಿ ಬಗ್ಗೆ ಗೊತ್ತಾಗಿರುತ್ತದೆ. ದಾವಾ ದಾಖಲಿಸಿದ ನಂತರ ನಾನು ಪತ್ರ ಬರಹಗಾರ ಮತ್ತು ಸಾಕ್ಷಿದಾರರ ಬಳಿ ಹೋಗಿ ಚೌಕಾಸಿ ಮಾಡಿರುವುದಿಲ್ಲ.

ನನ್ನ ಪ್ರತಿವಾದ ಪತ್ರದಲ್ಲಿ ನಕಲಿ ಸಹಿ ಮಾಡಿ ನಿಪಿ 1 ನ್ನು ಸೃಷ್ಟಿಸಿದ್ದಾರೆ ಎಂದ ಹೇಳಿದ್ದೇನು ಆ ಬಗ್ಗೆ ವಾದಿಗಳ ವಿರುದ್ಧ ಠಾಣೆಯಲ್ಲಿ ದೂರನ್ನು ದಾಖಲಿಸಿದ್ದೇನೆ ಎಂದರೆ ಇಲ್ಲ.

ವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೇಳಿರುತ್ತಾರೆ ಆಲಿಸಿ ನ್ಯಾಯದ ಹಿತದೃಷ್ಟಿಯಿಂದ ಪಾಟೀ ಸವಾಲನ್ನು ಮುಂದಿನ ಮುದ್ದತ್ತಿಗೆ ಮುಂದೂಡಲಾಯಿತು.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಕ್ಕೋಡಿ.